

## ಕಣ್ಸೆಳೆಯುವ ಸುಂದರ ಹೂ

# ಕಾಕ್ಸ್ ಕೂಂಬ್

■ ಪದ್ಮಜಾ ಸುಂದರೇಶ್

ಈ ಸುಂದರ ಹೂವುಗಳ ಹೆಸರು ಕಾಕ್ಸ್ ಕೂಂಬ್. ಇದರ ಹೂಗಳು ಹುಂಜದ ತಲೆಯ ಮೇಲಿರುವ ಪುಚ್ಛವನ್ನು ಹೋಲುವುದರಿಂದ ಇದನ್ನು ಆಂಗ್ಲ ಭಾಷೆಯಲ್ಲಿ ಕಾಕ್ಸ್ ಕೂಂಬ್ ಎಂದು ಕರೆಯುತ್ತಾರೆ. ಅಂದರೆ ಕನ್ನಡದಲ್ಲಿ ಕೋಳಿ ಜುಟ್ಟಿನ ಹೂ!

ಅಮರಂತೇಸೀ ಕುಟುಂಬಕ್ಕೆ ಸೇರಿದ ಒಂದು ವಿಧದ ಅಲಂಕಾರಿಕ ಸಸ್ಯವಿದು. ವಾರ್ಷಿಕ ಬೆಳೆಯ ಈ ಸಸ್ಯ 624 ಅಂಗುಲದವರೆಗೆ ಬೆಳೆಯುತ್ತದೆ. ಕಾಂಡವು ಮೃದುವಾಗಿರುತ್ತದೆ. ಎಲೆಗಳು ಹಸಿರು ಅಥವಾ ನಸುಕೆಂಪು ಬಣ್ಣದ್ದು. ಆಕರ್ಷಕ ಕಡುಕೆಂಪು, ಬಿಳಿ, ಹಳದಿ, ಗಾಢ ಗುಲಾಬಿ ಹಾಗೂ ಕಂದು ಬಣ್ಣಗಳಲ್ಲಿ ಹೂಗಳು ಅರಳುತ್ತಿದ್ದು ಮುಟ್ಟಲು ವೆಲ್ವೆಟ್‌ನಂತೆ ಮೃದುವಾಗಿರುತ್ತವೆ. ಆದ್ದರಿಂದ ಮೆಕ್ಸಿಕೋ ದೇಶದಲ್ಲಿ ಇವುಗಳನ್ನು ವೆಲ್ವೆಟ್ ಹೂಗಳೆಂದೇ ಕರೆಯುತ್ತಾರೆ.

ಈ ಹೂಗಳು ಅಸಂಖ್ಯಾತ ಬೀಜಗಳನ್ನು ಉತ್ಪತ್ತಿ ಮಾಡುವುದರಿಂದ ಸುಲಭವಾಗಿ ಹೊಸ ಸಸ್ಯಗಳನ್ನು ಪಡೆಯಬಹುದು. ಈ ಸಸ್ಯ ರೋಗನಿರೋಧಕ ಶಕ್ತಿಯನ್ನು ಹೊಂದಿರುವುದರಿಂದ ಇದನ್ನು ಬೆಳೆಸಲು ವಿಶೇಷ ಆರೈಕೆಯ ಅಗತ್ಯವಿರುವುದಿಲ್ಲ. ಮನೆಯ ಒಳಾಂಗಣದಲ್ಲಿ ಮತ್ತು ಹೊರಗೆಯೂ ಹೆಚ್ಚು ಶ್ರಮವಿಲ್ಲದೆ ಬೆಳೆಯುತ್ತದೆ.

ಕಾಕ್ಸ್ ಕೂಂಬ್ ಒಂದು ಅಲಂಕಾರಿಕ ಸಸ್ಯವಾಗಿದ್ದರೂ ನೈಜೀರಿಯಾ, ವೆಸ್ಟ್ ಇಂಡೀಸ್, ಭಾರತ, ಇಂಡೋನೇಷ್ಯಾ ಹಾಗೂ ಏಷ್ಯಾದ ಕೆಲವು ದೇಶಗಳಲ್ಲಿ ಈ ಸಸ್ಯದ ಎಲೆ ಹಾಗೂ ಕಾಂಡವನ್ನು ಆಹಾರವಾಗಿ ಬಳಸುವುದಿದೆ. ಮುಖ್ಯವಾಗಿ ಹಸಿರು ಎಲೆ ತರಕಾರಿಯಂತೆ ಇದನ್ನು ಆಹಾರವಾಗಿ ಬಳಸುತ್ತಾರೆ. ●

